


# ಹಳೆಯ ನಾಗರ; ಹೊಸ ಶೃಂಗಾರ

**ಕನ್ನಡ ಚಿತ್ರರಂಗದ ಅತ್ಯುತ್ತಮ ಜನಪ್ರಿಯ ಚಿತ್ರಗಳಲ್ಲೊಂದಾದ ನಾಗರಹಾವು ಮತ್ತೆ ಪ್ರೇಕ್ಷಕರ ಎದುರು ಬರುತ್ತಿದೆ. ಪುಟ್ಟಣ್ಣ ಕಣಗಾಲರ ಈ ಚಿತ್ರದಲ್ಲಿ ಗಾಂಧಿನಗರ ಗಮನಿಸಲೇಬೇಕಾದ ಕೆಲವು ಪಾಠಗಳಿವೆ.**

■ ರಘು

ಸುಮಾರು ನಾಲ್ಕೂವರೆ ದಶಕಗಳ ಹಿಂದೆ, 1972ರಲ್ಲಿ ತೆರೆಕಂಡಿದ್ದ 'ನಾಗರಹಾವು' ಸಿನಿಮಾ ಮತ್ತೆ ತೆರೆ ಕಾಣುತ್ತಿದೆ. ಜುಲೈ 20ರಂದು ಮರಳಿ ಚಿತ್ರಮಂದಿರಗಳಲ್ಲಿ ಕಾಣಿಸಿಕೊಳ್ಳಲಿರುವ ಈ ಚಿತ್ರದ ಸಂಪೂರ್ಣ ಧ್ವನಿವಿನ್ಯಾಸವೇ ಬದಲಾಗಿದೆ.

ತ.ರಾ.ಸು. ಅವರ ಮೂರು ಕಾದಂಬರಿಗಳನ್ನಾಧರಿಸಿ ರೂಪುಗೊಂಡ 'ನಾಗರಹಾವು' ಎನ್. ವೀರಾಸ್ವಾಮಿ ಅವರ 'ಈಶ್ವರಿ ಪಿಕ್ಚರ್ಸ್' ರೂಪಿಸಿದ ಅಪೂರ್ವ ಚಿತ್ರಗಳಲ್ಲೊಂದು. ಪುಟ್ಟಣ್ಣ ಕಣಗಾಲ್ ನಿರ್ದೇಶನದ ಈ ಸಿನಿಮಾ ಕನ್ನಡ ಚಿತ್ರರಂಗದ ಪಾಲಿಗೆ ಹಲವು ಕಾರಣಗಳಿಂದ ಸ್ಮರಣೀಯ ಸಿನಿಮಾ.

ವಿಷ್ಣುವರ್ಧನ್ ಅವರನ್ನು ನಾಯಕನಟನನ್ನಾಗಿ, ಅಂಬರೀಶ್ ಅವರನ್ನು ನಟನನ್ನಾಗಿ ಕನ್ನಡ ಚಿತ್ರರಂಗಕ್ಕೆ ಪರಿಚಯಿಸಿದ ಚಿತ್ರ ನಾಗರಹಾವು. ರಾಮಾಚಾರಿ ಎನ್ನುವ ಸ್ವಾಭಿಮಾನಿ ಒರಟು ಹುಡುಗನ ಪಾತ್ರದಲ್ಲಿ ವಿಷ್ಣುವರ್ಧನ್ ಪ್ರೇಕ್ಷಕರ ಮನಸೂರೆಗೊಂಡಿದ್ದರು. ರಾಮಾಚಾರಿಯ ರೋಷತಪ್ತ ತರುಣನ ಹ್ಯಾಂಗೋವರ್ ವಿಷ್ಣು ಅವರ ವೃತ್ತಿಜೀವನದುದ್ದಕ್ಕೂ ಹಿಂಬಾಲಿಸಿದ್ದು ಆ ಪಾತ್ರದ ಶಕ್ತಿಯಂತಿತ್ತು.

ರಾಮಾಚಾರಿಯ ಪಾತ್ರ ಮಾತ್ರವಲ್ಲ – ನಾಗರಹಾವು ಚಿತ್ರದಲ್ಲಿ ಪುಟ್ಟಣ್ಣ ರೂಪಿಸಿದ ಬಹುತೇಕ ಪಾತ್ರಗಳು ಪ್ರೇಕ್ಷಕರ ಮನಸ್ಸಿನಲ್ಲಿ ಅಚ್ಚೊತ್ತಿರುವ ಪಾತ್ರಗಳೇ ಆಗಿವೆ. ಜಲೀಲನಾಗಿ ಒಂದೆರಡೇ ದೃಶ್ಯಗಳಲ್ಲಿ ಕಾಣಿಸಿಕೊಳ್ಳುವ ಅಂಬರೀಶ್, ಒನಕೆ ಓಬವ್ವನಾಗಿ ಹಾಡೊಂದರಲ್ಲಿ ಕಾಣಿಸಿಕೊಳ್ಳುವ ಜಯಂತಿ – ಈ ಪುಟ್ಟ ಪಾತ್ರಗಳು ಕಲಾವಿದರಿಗೆ ತಂದುಕೊಟ್ಟ ಜನಪ್ರಿಯತೆಯೇನೂ ಸಣ್ಣದಲ್ಲ. ಇನ್ನು ಅಶ್ವತ್ಥ್ ನಟನೆಯ ಚಾಮಯ್ಯ ಮೇಷ್ಟ್ರು ಪಾತ್ರ ಕನ್ನಡ ಪ್ರೇಕ್ಷಕರು ಕಂಡ ಅತ್ಯುತ್ತಮ ಮೇಷ್ಟ್ರು ಪಾತ್ರಗಳಲ್ಲೊಂದು ಮಾತ್ರವಲ್ಲ, ಕನ್ನಡ ಚಿತ್ರರಂಗ ರೂಪಿಸಿದ ಅತ್ಯುತ್ತಮ ಪಾತ್ರಗಳಲ್ಲೂ ಒಂದು.

ಚಿತ್ರದುರ್ಗದ ಕೋಟೆಯನ್ನು ಒಂದು ಪಾತ್ರವೆಂಬಂತೆ ಬಳಸಿಕೊಂಡಿರುವುದು ಚಿತ್ರದ ಮತ್ತೊಂದು ಹೆಗ್ಗಳಿಕೆ. ದುರ್ಗದ ಬಂಡೆಕಲ್ಲುಗಳು, ಅವಶೇಷಗಳು ರಾಮಾಚಾರಿಯ ವ್ಯಕ್ತಿತ್ವ ಮತ್ತು ಬದುಕಿನ ರೂಪಕಗಳಂತೆಯೂ ಕಾಣಿಸುತ್ತವೆ. ನಾಗರಹಾವು ಪ್ರೇಮಕಥೆಯೂ ಹೌದು, ಮೇಷ್ಟ್ರು–ಶಿಷ್ಯನ ಸಂಬಂಧದ ಕಥನವೂ ಹೌದು.

ಪುಟ್ಟಣ್ಣ ಕಣಗಾಲ್, ವಿಷ್ಣುವರ್ಧನ್, ವಿಜಯಭಾಸ್ಕರ್, ಅಶ್ವತ್ಥ್, ಹಾಗೂ ವೀರಾಸ್ವಾಮಿ ಅವರಿಲ್ಲದಿದ್ದರೂ ಚಿತ್ರತಂಡದ ಅನೇಕರು ಈಗಲೂ ನಮ್ಮೊಂದಿಗಿದ್ದಾರೆ. ಜಯಂತಿ, ಅಂಬರೀಶ್, ಶಿವರಾಂ, ಲೋಕನಾಥ್, ಲೀಲಾವತಿ – ಇವರೆಲ್ಲ ನಾಗರಹಾವು ಯಶಸ್ಸಿನ ರುಚಿ ಸವಿದವರೇ ಆಗಿದ್ದಾರೆ. ವೀರಾಸ್ವಾಮಿ ಅವರ ಪುತ್ರ ಬಾಲಾಜಿ ಅತ್ಯಂತ ಮಹತ್ವಾಕಾಂಕ್ಷೆಯಿಂದ ಹಳೆಯ ಚಿತ್ರಕ್ಕೆ ಹೊಸರೂಪು ನೀಡಿ ತೆರೆಕಾಣಿಸುತ್ತಿದ್ದಾರೆ.

ಸ್ವಂತಿಕೆಯ ಕೊರತೆಯಿಂದ ಕನ್ನಡ ಸಿನಿಮಾಗಳು ಬಳಲುತ್ತಿರುವ ಸಂದರ್ಭದಲ್ಲಿ ನಾಗರಹಾವು ತೆರೆಕಾಣುತ್ತಿದೆ. ಕಥನದ ದೃಷ್ಟಿಯಿಂದ ಹಾಗೂ ಕಟ್ಟುವಿಕೆಯ ದೃಷ್ಟಿಯಿಂದ ಈ ಸಿನಿಮಾ ಈ ಕಾಲದ ನಿರ್ಮಾಪಕ, ನಿರ್ದೇಶಕರು ಗಮನಿಸಲೇಬೇಕಾದ ಒಂದು ಮಾದರಿ. ಜನಪ್ರಿಯ ಚಿತ್ರವೊಂದರಲ್ಲಿ ಕನ್ನಡದ ಸೊಗಡನ್ನು ಕಾಣಿಸುವುದು ಹೇಗೆ ಎನ್ನುವುದಕ್ಕೂ ಪುಟ್ಟಣ್ಣನವರ ಚಿತ್ರ ಒಳ್ಳೆಯ ಉದಾಹರಣೆ. ■